AGLASEM.COM

MODEL QUESTION PAPER

II PUC

2024

ಕನ್ನಡ (01)

ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆ ಪ್ರತಿಕೆ 2023-24

ಅವಧಿ : 3 ಗಂಟೆ 15 ನಿಮಿಷ **ಗರಿಷ್ಟ ಅಂಕಗಳು: 80**

I. ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.

(10X1=10)

1. ಸೌಮಿತ್ರಿ ಎಂದರೆ ಯಾರು?
   ಅ) ರಾಮ ಆ) ಭರತ ಇ) ಲಕ್ಷ್ಮಣ ಈ) ರಾವಣ
2. ಗುರು ಹೇಗೆ ವರ್ತಿಸಬಾರದು?
   ಅ) ಕೆಟ್ಟದಾಗಿ ಆ) ಲಘುವಾಗಿ ಇ) ಸರಿಯಾಗಿ ಈ) ತಪ್ಪಾಗಿ
3. ಯಮಸುತಂಗರುಹುವೆನೆ ಧರ್ಮ
   ಕ್ಷಮೆಯ ಗರಹೊಡೆದಿಹುದು ಪಾರ್ಥನು
   ಮಮತೆಯುಳ್ಳವನೆಂಬೆನೆ ತಮ್ಮಣ್ಣನಾಜ್ಞೆಯಲಿ
   ಭ್ರಮಿತನಾಗಿಹನು – ಈ ಪದ್ಯಭಾಗದಲ್ಲಿ ದ್ರೌಪದಿ ಧರ್ಮರಾಯನನ್ನು ಕುರಿತು ಏನೆಂದು ಚಿಂತಿಸುತ್ತಾಳೆ?
   ಅ) ಧರ್ಮ ಪರಿಪಾಲನಾ ನಿರತ
   ಆ) ತನ್ನ ಮೇಲೆ ಮಮತೆಯುಳ್ಳವನು
   ಇ) ಧರ್ಮ ಮತ್ತು ಕ್ಷಮೆಯ ದೆವ್ವ ಹಿಡಿದವನು
   ಈ) ಅರ್ಜುನನ ಮೇಲೆ ಪ್ರೀತಿಯುಳ್ಳವನು
4. ದನಗಳಿಗೆ ಏನಿಲ್ಲ ಎಂದು ಕವಯಿತ್ರಿ ಹೇಳುತ್ತಾರೆ ?
   ಅ) ನೀರಿಲ್ಲ ಆ) ಮೇವಿಲ್ಲ ಇ) ಗಂಜಿಯಿಲ್ಲ ಈ) ಊಟವಿಲ್ಲ
5. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ?
   ಅ) ಬತ್ತಿ ಆ) ಮಂಜು ಇ) ದೀಪ ಈ) ನಕ್ಷತ್ರ
6. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?
   ಅ) ಸೀತಾ ಆ) ಪ್ಲೇವಿಯಾ ಇ) ಕಮಲಾ ಮೇಡಂ ಈ) ನಿಶಾಶರ್ಮ
7. ಎಲವೋ ಹುಲುಮಾನವ ವೆಂಕಪ್ಪಯ್ಯ, ಸುತ್ತಲ ನಾಕೂರಲ್ಲಿರುವ ಯಾವನೇ ಶ್ಯಾನಭೋಗ ಉಗ್ರಾಣಿಯಾನ್ನಾದರೂ ಕರೆತಂದು ನನ್ನೆದರು ಸರಪಳಿ ಎಳೆಸು. ಅವೆಲ್ಲವೂ ನನ್ನಲ್ಲದಿದ್ದರೆ ಕೇಳು ಮತ್ತೆ ಧಣಿಗಳ ಬೆಳ್ಳಿಲೋಟ ಗದ್ಯದ ಈ ಸಾಲುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ.
   ಅ) ವೆಂಕಪ್ಪಯ್ಯನವರ ನಿಸ್ವಾರ್ಥ
   ಆ) ಹೊಳೆಗೆ ವೆಂಕಪ್ಪಯ್ಯನ ಮೇಲಿನ ಪ್ರೀತಿ
   ಇ) ಪ್ರಕೃತಿಯ ಮೇಲಿನ ಮಾನವ ಪ್ರೀತಿ
   ಈ) ಪ್ರಕೃತಿ ಮೇಲಿನ ಮನುಷ್ಯ ದಬ್ಬಾಳಿಕೆ
8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?
   ಅ) ಮಚ್ಚು ಆ) ಕೊಡಲಿ ಇ) ಸಲಿಕೆ ಈ) ಗುದ್ದಲಿ
9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?
   ಅ) ದುರ್ಗಪ್ಪ ಆ) ತಿಪ್ಪಣ್ಣ ಇ) ರಮೇಶ್‌ಬಾಬು ಈ) ಪ್ರಕಾಶ

schools.aglasem.com

aglasem.com

10 ಇದ್ದಿದ್ದನ್ನು ನಡಸ್ಕೊಂಡು ಹೋಗೋದೆ ಕಷ್ಟಆಗಿದೆ. ಜನಗಳ ವಿಶ್ವಾಸವನ್ನು ಉಳಿಸ್ಕೊಂಡು, ಕುರ್ಚಿನೂ ಉಳಿಸಿಕೊಂಡು ಟರ್ಮು ಮುಗಿಸಿದರೆ ಸಾಕಾಗಿದೆ– ಖಾನ್ ಸಾಹೇಬರ ಈ ಮಾತು ಏನನ್ನು ಸೂಚಿಸುತ್ತದೆ.

ಅ) ಜನರ ಮೇಲಿನ ಕಾಳಜಿ

ಆ) ಜನರೊಟ್ಟಿಗಿನ ಸಹಬಾಳ್ವೆ

ಇ) ಅಧಿಕಾರದ ಲಾಲಸೆ

ಈ) ಸಮಾಜದ ಮೇಲಿನ ಪ್ರೀತಿ

ಆ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: (5X1=5)

(ಮುದ್ದಣ, ಮಗು, ಪೂಣಚ್ಚಿ, ಹಳ್ಳಿಯಚಹಾಹೊಟೇಲ್, ಬೌದ್ಧ, ಮನೋರಮೆ)

11. ಮಾರ್ಷ್‌ನ ಜೊತೆಗಾರನ ಹೆಸರು .

12. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ..

13. ಅಬ್ದುಲ್ ಕಲಾಂ ಅವರ ಪ್ರಕಾರ ಭೂಮಿಯ ಮೇಲಿನ ಮೊದಲ ವಿಜ್ಞಾನಿ ..

14. ಕನ್ನಡವು ಕಸ್ತೂರಿಯಲ್ಲವೇ ! ಎಂದವರು ..

15 ಲೋಕಲ್ ಸುದ್ದಿಗಳಿಗೆ .. ಇಲ್ಲಿ ಪ್ರಾಶಸ್ತ್ಯವಿದೆ.

ಇ). ಹೊಂದಿಸಿ ಬರೆಯಿರಿ: (5X1=5)

16. ಹಬ್ಬಲಿ ಅವರ ರಸಬಳ್ಳಿ	ಅ) ಹತ್ತಿ ಚಿತ್ತ ಮತ್ತು..
17. ಜಾಲಿಯ ಮರದಂತೆ	ಆ) ಬೆಳಗು ಜಾವ
18. ಅಂಬಿಕಾತನಯದತ್ತ	ಇ) ಪುರಂದರದಾಸರು
19. ಜಿ.ಎಸ್.ಶಿವರುದ್ರಪ್ಪ	ಈ) ಜನಪದ
20. ಟಿ ಯಲ್ಲಪ್ಪ	ಉ) ಮುಂಬೈ ಜಾತಕ
	ಊ) ಒಂದು ಹೂ ಹೆಚ್ಚಿಗೆ ಇಡುತೀನಿ

ಆ–ವಿಭಾಗ

II. ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: (3X2=6)

21. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ ?

22. ಹಿತ್ತಾಳೆಗಿಂತ ಬಲುಹೀನ ಯಾವುದು?

23. ಕವಿ ಬೇಂದ್ರೆ ಬಾಳಿನ ಬಗ್ಗೆ ಕೊಡುವ ಸಂದೇಶವೇನು?

24. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷತಾಳಿವೆ?

ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: (2X2=4)

25. ಡಾ॥ ಚಂದ್ರಪ್ಪ ಬಸಲಿಂಗನಿಗೆ ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

26. ಬ್ರಿಟೀಷರು ಬರುವ ಮೊದಲು ವಾಲ್‌ಪರೈ ನ ಸೊಬಗನ್ನು ವರ್ಣಿಸಿ?

27. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

28. ಸುದಿಯ ಸೂರಪ್ಪನಾದ ಭರವಣ್ಣ ಗೊಂಬೆಯನ್ನು ಹೇಗೆ ವರ್ಣಿಸುತ್ತಾನೆ?

schools.aglasem.com

aglasem.com

ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: (3X2=6)

29. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
30. ಫಾರೆಸ್ಟ್ ಡಿಪಾರ್ಟ್‌ಮೆಂಟಿನ ನಂಬರ್ ಒನ್ ಎನಿಮಿಗಳು ಯಾರು?
31. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದ?
32. ತಿಪ್ಪಣ್ಣನ ಸಾವಿಗೆ ಆನೆಯೇ ಕಾರಣವೆಂದು ದುರ್ಗಪ್ಪನ ಹೇಳಿಕೆ ಸರಿಯೇ? ಸಮರ್ಥಿಸಿ.

ಇ-ವಿಭಾಗ

III. ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ (2X3=6)

33. ಹಗೆಗಳನು ಹಿಂಡಿದನು ಮನದೊಳಗೆ
34. ಕುಳಿತು ಕೆಮ್ಮುವ ಪ್ರಾಣಿ
35. ಮಾತೇ ಮರೆತು ಹೋಗಿದೆ ಕಣೆ

ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: (1X3=3)

36. ನಾವು ಯಾವ ಪತ್ರಿಕೆಗಳನ್ನು ಓದುತ್ತಿದೇವೆ?
37. ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ.

ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: (1X3=3)

38. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.
39. ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲಾ ..

ಈ - ವಿಭಾಗ

IV ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : (2X4=8)

40. ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ನಿರೂಪಿಸಿದ್ದಾರೆ?
41. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
42. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ:
43. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?

ಆ) ಯಾವುದಾದರೂ ಒಂದು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : (1X4=4)

44. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?
45. ಸೀತಾ ಎಂಬ ಗೆಳತಿಯ ಗುಣಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?
46. ಧಣಿ ಮತ್ತು ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ?

ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : (1X4=4)

47. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?
48. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ:

schools.aglasem.com
aglasem.com

ಭಾಷಾಭ್ಯಾಸ

V. ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (4X2=8)

49. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.
ಬಟ್ಟೆ, ಅರಿ, ದೊರೆ

50. ಕೆಳಗಿನ ಎರಡು ಕ್ರಿಯಾಪದಗಳ ಧಾತುರೂಪವನ್ನು ಬರೆಯಿರಿ.
ಹಾಡುವಳು, ಕುಣಿಯುತ್ತಿತ್ತು, ನುಡಿದನು

51. ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.
ಅಡಿಪಾಯ, ಅಜಗಜಾಂತರ, ಕಣ್ಣರಳಿಸು

52. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.
ಕಿರುಹಾದಿ, ಮರಿಗೂಬೆ, ಘೋರಪಾತಕಿ

53. ಕೆಳಗಿನ ಎರಡು ಪದಗಳಿಗೆ ವಿಭಕ್ತಿ ಪ್ರತ್ಯಯ ಬರೆಯಿರಿ.
ಕಚೇರಿಯಲ್ಲಿ, ಬಸಲಿಂಗನನ್ನು, ಕದಡಿದ

54. ಈ ಕೆಳಗಿನ ಎರಡು ಪದಗಳಿಗೆ ನಿಷೇದಾರ್ಥಕ ಪದ ಬರೆಯಿರಿ,
ಹಾಡುವನು, ಓದಿದಳು, ಹೋಗುವುದು.

ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ: (1X4=4)

55. ದೇಶದ ಪ್ರಗತಿಯಲ್ಲಿ ಯುವಜನರ ಪಾತ್ರ

ಅಥವಾ

ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ

ಇ) ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. (1X4=4)

(ಯಾವುದೇ ಪತ್ರ ಲೇಖನದಲ್ಲಿ ಹೆಸರು, ನಮೂದಿಸಬಾರದು; ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು. ಉದಾ: ಅ.ಬ.ಕ)

56. ನಿಮಗೆ ಶೈಕ್ಷಣಿಕ ಸಾಲ ಸೌಲಭ್ಯವನ್ನು ಒದಗಿಸುವಂತೆ ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಸ್ವಾತಂತ್ರ್ಯೋತ್ಸವವನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

****

schools.aglasem.com
AglaSem Earn while Learn Program. Send your papers and get paid.
Contact: support@aglasem.com
aglasem.com